ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀ ಅರುಣ ಶಹಾಪುರ ರವರು ನಿಯಮ-72ರ ಅಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಉತ್ತರ.

**ವಿಷಯ:-**

ಡಿ.ಎಡ್ ಉಪನ್ಯಾಸಕರ ವೇತನವನ್ನು ಸರಿಯಾದ ಸಮಯಕ್ಕೆ ಆಗದೆ ಉಪನ್ಯಾಸಕರು ತಮ್ಮ ಜೀವನ ನಿರ್ವಹಣೆ ಮಾಡುವುದು ಕಷ್ಟಕರವಾಗಿರುತ್ತದೆ. ಕೂಡಲೇ ವೇತನ ಬಿಡುಗಡೆ ಮಾಡಲು ಆಗಿರುವ ತೊಂದರೆಗಳನ್ನು ಸರಿಪಡಿಸಿ ವೇತನ ಬಿಡುಗಡೆ ಮಾಡುವ ಬಗ್ಗೆ ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮತ್ತು ಸಕಾಲ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಉತ್ತರ:-**

2019-20ನೇ ಸಾಲಿನಲ್ಲಿ ರಾಜ್ಯದ ಅನುದಾನಿತ ಡಿ.ಎಲ್.ಇಡಿ ಕಾಲೇಜುಗಳ ಬೋಧಕ/ಬೋಧಕೇತರ ಸಿಬ್ಬಂದಿ ವೇತನಕ್ಕಾಗಿ ರೂ: 1296.00 ಲಕ್ಷಗಳ ಆಯವ್ಯಯ ನಿಗಧಿಯಾಗಿರುತ್ತದೆ. ನಿಗಧಿಯಾಗಿರುವಂತೆ ಸರ್ಕಾರದಿಂದ ಅನುದಾನ ಬಿಡುಗಡೆಯಾಗಿರುತ್ತದೆ. ಬಿಡುಗಡೆಯಾಗಿರವ ಅನುದಾನವನ್ನು ನಾಲ್ಕು ಸಮ ಕಂತುಗಳಲ್ಲಿ (ಪ್ರತಿ ತ್ರೈಮಾಸಿಕ್ಕೆ ರೂ: 324.00 ಲಕ್ಷ) ಬಿಡುಗಡೆ ಮಾಡಲಾಗಿದೆ. ತ್ರೈಮಾಸಿಕವಾರು ಬಿಡುಗಡೆ ಮಾಡಲಾಗುತ್ತಿರುವ ಅನುದಾನದಲ್ಲಿ ಆದ್ಯತೆಯ ಮೇರೆಗೆ ವೇತನಕ್ಕಾಗಿ ಮಾತ್ರ ವೆಚ್ಚ ಭರಿಸುವಂತೆ ಸ್ಪಷ್ಟ ನಿರ್ದೇಶನ ನೀಡಲಾಗಿದೆ. ಆದಾಗ್ಯೂ ವೇತನ ಹೊರತುಪಡಿಸಿ, ಬಾಕಿ ವೇತನಗಳನ್ನು ಪೂರಕ ಬಿಲ್ಲುಗಳಲ್ಲಿ ಸೆಳೆದು ವೆಚ್ಚ ಭರಿಸಿರುವುದರಿಂದ, ವೇತನಕ್ಕಾಗಿ ಕೊರತೆಯುಂಟಾಗಿರುತ್ತದೆ.

ಅನುದಾನಿತ ಡಿ.ಎಲ್.ಇಡಿ ಕಾಲೇಜುಗಳಲ್ಲಿನ ಸಿಬ್ಬಂದಿಗೆ ಪರಿಷ್ಕೃತ ವೇತನ ಶ್ರೇಣಿ ಅನುಷ್ಠಾನ, ವಾರ್ಷಿಕ ವೇತನ ಬಡ್ತಿ, ತುಟ್ಟಿ ಭತ್ಯೆ ಹೆಚ್ಚಳ, ನಿವೃತ್ತಿಯಾಗಿರುವ/ನಿವೃತ್ತಿಯಾಗಲಿರುವ ಸಿಬ್ಬಂದಿಯ ಗಳಿಕೆ ರಜೆ ನಗದೀಕರಣ ಹಾಗೂ ಬಾಕಿ ವೇತನಕ್ಕಾಗಿ ಡಯಟ್‌ಗಳಿಂದ ಸ್ವೀಕೃತವಾದ ಬೇಡಿಕೆಯನ್ನು ಕ್ರೋಢೀಕರಿಸಿ, ದಿನಾಂಕ:29/02/2020ರಲ್ಲಿ ರೂ:1,26,46,716/-ಗಳ ಅನುದಾನದ ಬೇಡಿಕೆ ಇದ್ದು ಅನುದಾನ ಮಂಜೂರು ಮಾಡಲು ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ಸಂಖ್ಯೆ: ಇಡಿ 26622 ಪಿಟಿಐ 2020

(ಎಸ್.ಸುರೇಶ್ ಕುಮಾರ್)
**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು**